ದಿನಾಂಕಃ 16.06.2025 ರಂದು ಕರೆಯಿಸಿ ಪುನಃ ಪ್ರಮಾಣ ವಚನ ಭೋಧಿಸಲಾಯಿತು

ಪಾಟೀ ಸವಾಲುಃ  ವಾದಿ ಪರ ವಕೀಲರಾದ ಶ್ರೀ.ಟಿ.ಎಸ್.ಆರ್ ರವರಿಂದ ಃ–

1 ನೇ ಪ್ರತಿವಾದಿಯವರ ತಂದೆಯ ಹೆಸರು ಶೇಷಗಿರಿಯಪ್ಪ. ಶೇಷಗಿರಿಯಪ್ಪ ನನಗೆ ಸಂಬಂಧದಲ್ಲಿ ಅಜ್ಜ. ಶೇಷಗಿರಿಯಪ್ಪ ಹಾಗೂ ಅವರ ಮಕ್ಕಳು ದಾವಾಸ್ವತ್ತಿನ ಮನೆಯಲ್ಲೇ ವಾಸವಾಗಿದ್ದರು ಎಂದರೆ ಸರಿ. ಶೇಷಗಿರಿಯಪ್ಪನ ಮಕ್ಕಳು ಉದ್ಯೋಗ ನಿಮಿತ್ತ ಬೇರೆ ಬೇರೆ ಕಡೆ ಹೋಗಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತು ಶೇಷಗಿರಿಯಪ್ಪ ಇರುವಾಗಲೇ ಮಂಜೂರು ಆಗಿತ್ತು ಎಂದರೆ ಆ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2000 ದ ಇಸವಿಯಲ್ಲಿ ಜನಾರ್ದನ ಅವರ ಹೆಸರು ಇತ್ತು ಅದಕ್ಕಿಂತ ಮೊದಲು ಯಾರ ಹೆಸರು ಇತ್ತು ಎಂದು ನನಗೆ ಗೊತ್ತಿಲ್ಲ. ಶೇಷಗಿರಿಯಪ್ಪರವರು ಇರುವಾಗಲೇ ಮನ್ಸಿಪಾಲಿಟಿಯಿಂದ ದುಡ್ಡು ಕಟ್ಟಲು ನೋಟೀಸು ಬರುತ್ತಿತ್ತು ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ.

ನಾನು ಖರೀದಿಸಿದ ಜಾಗದಲ್ಲೇ ದೇವಸ್ಥಾನ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಕ್ಕದಲ್ಲಿದೆ ಎಂದು ನುಡಿಯುತ್ತಾರೆ. ನಾನು ಖರೀದಿಸಿದ ಜಾಗ ಪೂರ್ವದಿಕ್ಕಿನದ್ದು.

ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ